ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮುಖ್ಯಮಂತ್ರಿಗಳಲ್ಲಿ ಇಷ್ಟೇ ಒತ್ತಾಯ ಮಾಡುವುದು. ನಾನೇನು ಕೇಳುತ್ತೇನೆ. ಇದು ಇವತ್ತು ಪ್ರಸ್ತಾಪ ಮಾಡುತ್ತಿರುವಂತಹ ವಿಷಯವಲ್ಲ. ಈ ಮನೆಯಲ್ಲಿ ಒಂದೇ ಆಡಳಿತ ಪಕ್ಷದ ಶಾಸಕರು ಇಲ್ಲಿ ಧರಣಿ ಕುಳಿತಿದ್ದನ್ನು ನಾವು ನೋಡಿದ್ದೇವೆ. ಅವರ ಸರ್ಕಾರ ವಿರುದ್ಧವೇ ಅವಿಶ್ವಾಸ ನಿರ್ಣಯ ಮಂಡನೆ ಮಾಡುವ ದಿಕ್ಕಿನಲ್ಲಿ 30-40 ಜನ ಬಂದು ಕುಳಿತು ಸಭಾ-ನಾಯಕರ ಮಾತು ಕೇಳದೇ ಸಭಾಧ್ಯಕ್ಷರ ಮಾತು ಕೇಳದೆ ಧರಣಿ ಕುಳಿತಿದ್ದು ಇದೇ ಜನ ಮಾಡಲಿಲ್ಲವೇ ಸ್ವಾಮಿ? ಉಪದೇಶ ಮಾಡುವುದು ಬಹಳ ಸುಲಭ ಸ್ವಾಮಿ. ಇವತ್ತು ಗಂಭೀರವಾದಂತಹ ವಿಷಯ, ದಾಖಲೆಗಳೊಂದಿಗೆ ಸಿಕ್ಕಿರಬೇಕಾದರೆ ಒಬ್ಬ ಅಧಿಕಾರಿ ನಮ್ಮ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಈ ರೀತಿ ಒಂದು ಆದೇಶವನ್ನು ಹೊರಡಿಸಿರುವಂತಹ, ಸುತ್ತೋಲೆಯನ್ನು ಕಳುಹಿಸಿರುವಂಥದ್ದು ತಲೆ ತಗ್ಗಿಸುವ ಘಟನೆ ಇದು. ನನ್ನ ಕಛೇರಿಯಿಂದ ಮಂತ್ರಿ ಕಛೇರಿಯಿಂದ ಯಾವುದೇ ಸೂಚನೆ ಬಂದರೆ ನೀವು ಪರಿಪಾಲನೆ ಮಾಡಬಾರದು ಎನ್ನುವ ಮಟ್ಟಕ್ಕೆ ಒಂದು ರೀತಿ ವ್ಯವಹಾರಗಳು ನಡೆಯುತ್ತಿದೆ. ಇದು ದಿಗ್ಭ್ರಮೆ ತರುವಂತಹ ಸಂಗತಿ. ದಾಖಲೆ ಸಿಕ್ಕಿದೆ. ಸಭಾ-ನಾಯಕರು ಹೇಳಿದರು ಸುದೀರ್ಘವಾಗಿ ಚರ್ಚೆ ಮಾಡೋಣ ಎಂದು, ಸುದೀರ್ಘ ಅಲ್ಲ, ಸೀಮಿತವಾಗಿರುವಂತಹ ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಚಿವರನ್ನು ಕ್ಯಾಬಿನೆಟಿನಿಂದ ಬಿಟ್ಟು ಎರಡೂ ಸದನದ ಒಂದು ಸಮಿತಿ ರಚನೆ ಮಾಡಿ ಎಂದು ಹೇಳಿದ್ದೇವೆ. ಅವರು ಸ್ಟೇಟಮೆಂಟ್ ಏನು ಮಾಡುತ್ತಾರೆಂದು ನೋಡಿಕೊಂಡು ನಾವು ಬರುತ್ತೇವೆ. ಕಾರ್ಯಕಲಾಪ ಮುಂದುವರಿಸಿ ನಾವು ಸಭಾತ್ಯಾಗ ಮಾಡಿ ಹೊರಗಡೆ ಹೋಗುತ್ತೇವೆ. ನಾವು ಅವರ ಸ್ಟೇಟಮೆಂಟ್ ಕೇಳಲೂ ರೆಡಿ ಇಲ್ಲ. ಏಕೆಂದರೆ ಅವರು ಆ ರೀತಿ ನಿಷ್ಪೂರವಾಗಿ ಒಂದು ಸ್ಟೇಟಮೆಂಟ್ ಮಾಡುವುದರಲ್ಲಿ ವಿಶ್ವಾಸ ಇಲ್ಲ. ನೀವು ಕಾರ್ಯಕಲಾಪ ನಡೆಸಿ. ಅವರ ಸ್ಟೇಟಮೆಂಟ್ ನೋಡಿಕೊಂಡು ಮತ್ತೆ ಮೆಲನಲ್ಲಿ ಕುಳಿತುಕೊಳ್ಳಬೇಕೋ ಹೊರಗೆ ಇರಬೇಕೋ ನಾವು ತೀರ್ಮಾನ ಮಾಡುತ್ತೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಬಿಜೆಪಿ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು)

. ಶ್ರೀ ಜೆ.ಎಚ್. ಪಟೇಲ್ : ಕರ್ನಾಟಕ ಬಿಟ್ಟು ಹೋಗಬೇಡಿ ಮತ್ತೆ ವಾಪಸ್ ಬನ್ನಿ.

(ಗೊಂದಲ)

+ ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿ ಪಡೆದು ಒಂದು ವಿಷಯ ಪ್ರಸ್ತಾಪ ಮಾಡಬೇಕು ಎಂದು ಮನಸ್ಸು ಇದೆ. ತಾವು ಅನುಮತಿ ಕೊಟ್ಟರೆ ಮಾತನಾಡುತ್ತೇನೆ.

ಅಧ್ಯಕ್ಷರು : ನೀವು ಯಾರು ಏನು ಬೇಕಾದರೂ ಮಾತನಾಡಿ. ರೂಲಿಂಗ್ ಕೊಡುವ ಸ್ಥಿತಿಗೆ ನನ್ನನ್ನು ತೆಗೆದುಕೊಂಡು ಹೋಗಬೇಡಿ-ಅಷ್ಟೆ.

ಶ್ರೀ ಮಾಲಾಳ್ ನಾಗರಾಜ್ : ಬಹಳ ಹೊತ್ತಿನ ನಂತರ ಮಾತನಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ.